**ಎಸ್ ಸಿ ನಂ. 5078/2021**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂ: 6**

**ಪಿ ಡಬ್ಲೂ: 4**

| | |
|---|---|
| ಸಾಕ್ಷಿಯ ಹೆಸರು - | ವೀರಣ್ಣ |
| ಗಂಡನ ಹೆಸರು - | ಚಂದ್ರಪ್ಪ |
| ವಯಸ್ಸು - | 63 ವರ್ಷ |
| ಉದ್ಯೋಗ - | ನಿವೃತ್ತ ಮ್ಯಾನೇಜರ್ |
| ವಾಸಸ್ಥಳ - | ನಂದಿಹಳ್ಳಿ ಗ್ರಾಮ |

**ಸಾಕ್ಷಿಯನ್ನು ದಿನಾಂಕ: 16-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಪಿ. ಪಿ. ಅವರಿಂದ**

ಆರೋಪಿತರು ನನಗೆ ಗೊತ್ತು. ಚಾಸಾ -1 ನನ್ನ ಮಗಳು. ಚಾಸಾ -4 ನನ್ನ ಹೆಂಡತಿಯ ತಂಗಿ.

2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯ ಅಣ್ಣ ಮತ್ತು ಅಕ್ಕ. 1 ನೇ ಆರೋಪಿಯೊಂದಿಗೆ ಚಾಸಾ -1 ರವರ ಮದುವೆ 2014 ರಲ್ಲಿ ಜರುಗಿತ್ತು. ಆ ಸಮಯದಲ್ಲಿ ರೂ. 2,00,000/- ನಗದು, 5 ತೊಲೆ ಬಂಗಾರ ಹಾಗೂ ಮೋಟಾರ್ ಸೈಕಲ್ ಖರೀದಿಗೆ ರೂ. 50,000/- ಚೆಕ್ ನೀಡಿದ್ದರು. 2 ವರ್ಷಗಳವರೆಗೆ ಚೆನ್ನಾಗಿ ಸಂಸಾರ ಮಾಡಿದ್ದರು. ಆರೋಪಿತರು ನನ್ನ ಮಗಳ ಮೇಲೆ ಹಲ್ಲೆ ಮಾಡಿ ಹೆಚ್ಚಿನ ವರದಕ್ಷಿಣೆಗೆ ಕಿರುಕುಳ ನೀಡುತ್ತಿದ್ದರು ಎಂದು ಪೋಲಿಸರಲ್ಲಿ ನಾನು ಹೇಳಿಲ್ಲ. ಪಿರ್ಯಾದಿ ನನ್ನ ಬಳಿ ಆರೋಪಿಗಳು ವರದಕ್ಷಿಣೆ ಕಿರುಕುಳ ನೀಡುತ್ತಿದ್ದ ಬಗ್ಗೆ ಹೇಳಿಕೊಂಡಿರುವುದಿಲ್ಲ. ಪೋಲಿಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಎಸ್ ಸಿ ನಂ. 5078/2021**

**ಪಾಟೀ ಸವಾಲುಃ ಮಾನ್ಯ  ಪಿ ಪಿ ಅವರಿಂದ**

1 ನೇ ಆರೋಪಿಯೊಂದಿಗೆ ಚಾಸಾ -1 ರವರ ಮದುವೆ 2014 ರಲ್ಲಿ ಜರುಗಿತ್ತು. ಆ ಸಮಯದಲ್ಲಿ ರೂ. 1,80,000/- ನಗದು, 5 ತೊಲೆ ಬಂಗಾರ ಹಾಗೂ ಮೋಟಾರ್ ಸೈಕಲ್ ಖರೀದಿಗೆ ರೂ. 50,000/- ಚೆಕ್ ನೀಡಿದ್ದು, 1 ತಿಂಗಳು ಮಾತ್ರ ಚೆನ್ನಾಗಿ ಸಂಸಾರ ಮಾಡಿದ್ದು, ನಂತರ ಆರೋಪಿತರೆಲ್ಲ ಸೇರಿ ಪಿರ್ಯಾದಿಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಿ, ಹೆಚ್ಚುವರಿಯಾಗಿ ರೂ. 5 ಲಕ್ಷ ಹಾಗೂ ಹಡಗಲಿಯ ಮನೆ ಹಾಗೂ 5 ಎಕರೆ ಜಮೀನನ್ನು  ವರದಕ್ಷಿಣೆಯಾಗಿ ತರಬೇಕೆಂದು ಕೇಳಿ ದೈಹಿಕವಾಗಿ ಹಲ್ಲೆ ಮಾಡಿದ ಬಗ್ಗೆ ಪಿರ್ಯಾದಿ ನನಗೆ ಪೋನ್ ಮೂಲಕ ಹಾಗೂ ಸಿಕ್ಕಿದಾಗಲೆಲ್ಲಾ ಹೇಳುತ್ತಿದ್ದು. ಈ ಬಗ್ಗೆ 3-4 ಪಂಚಾಯತಿ  ನಡೆದು ಬುದ್ದಿ ಹೇಳಿದ್ದು, ದಿಃ 08-02-2016 ರಂದು ಪಿರ್ಯಾದಿಗೆ ಹಲ್ಲೆ ಮಾಡಿ ಹೆಚ್ಚಿನ ವರದಕ್ಷಿಣೆ ತರುವಂತೆ ತವರು ಮನೆಗೆ ಕಳುಹಿಸಿದ್ದು, ನಂತರ ಪಂಚಾಯತಿ ನಡೆದು ಚಾಸಾ -4 ಮತ್ತು 5 ಆಕೆಯನ್ನು ಗಂಡನ ಮನೆಗೆ ದಿಃ 06-03-2014 ರಂದು ಬಿಟ್ಟು ಬಂದಿದ್ದು. ಮಧ್ಯಾಹ್ನ 02.30 ರ ಸಮಯದಲ್ಲಿ ಆರೋಪಿತರೆಲ್ಲರೂ ಮನೆಯಲ್ಲಿದ್ದು, ಅವರನ್ನು ನಿಂದಿಸಿ, ಪಿರ್ಯಾದಿಯ ಕೂದಲು ಹಿಡಿದು ಎಳೆದಾಡಿ, ಕಾಲಿನಿಂದ ಒದ್ದು, ಗೋಡೆಗೆ ತಲೆ ಚಚ್ಚಿ ಪ್ರಾಣ ಬೆದರಿಕೆ ಹಾಕಿ 1 ನೇ ಆರೋಪಿ ಕೊಲೆ ಮಾಡುವ ಉದ್ದೇಶದಿಂದ ಪಿರ್ಯಾದಿಯ ಕುತ್ತಿಗೆ ಹಿಸುಕಿದ್ದು.

ಈ ಎಲ್ಲಾ ವಿಚಾರದ ಬಗ್ಗೆ ಪೋಲಿಸರ ಮುಂದೆ "ನಾನು ............. ನೀಡಿರುತ್ತೇನೆ" ಎಂದು  ನಿಪಿಃ 9 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಎಸ್ ಸಿ ನಂ. 5078/2021**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ವಿ ಪಿ., ವಕೀಲರಿಂದಃ**

ಚಾಸಾ -5 ನನ್ನ ಮೇಲೆ 1982 ರಿಂದ ಜೀವನಾಂಶಕ್ಕೆ ಕೇಸ್ ಹಾಕಿದ್ದಾಳೆ ಅಂದರೆ ಸರಿ. ಇದುವರೆಗೂ ನಾನು ಜೀವನಾಂಶ ನೀಡುತ್ತಿದ್ದೇನೆ. ನನ್ನ ಹೆಂಡತಿ ಮಕ್ಕಳು ಬಹಳ ವರ್ಷಗಳಿಂದ ನನ್ನ ಜೊತೆಗೆ ಮಾತನಾಡುತ್ತಿಲ್ಲ. ಚಾಸಾ -4 ಹೇಳಿದಂತೆ ನನ್ನ ಹೆಂಡತಿ ಮಕ್ಕಳು ಕೇಳುತ್ತಾರೆ ಅಂದರೆ ಸರಿ. ಚಾಸಾ -4 ಅವಿವಾಹಿತೆ. ನಾನು ಮದುವೆಯಾದ ನಂತರ ಆರೋಪಿಯ ಮನೆಗೆ ಹೋಗಿಲ್ಲ ಅಂದರೆ ಸರಿಯಲ್ಲ. ಮದುವೆಯಾಗಿ 20 ದಿನಕ್ಕೆ ಚಾಸಾ -1 ಧಾರವಾಡದ ಪಾಂಡುರಂಗ ಆಸ್ಪತ್ರೆಯಲ್ಲಿ 2 ಬಾರಿ ಮಾನಸಿಕ ರೋಗಕ್ಕೆ ಚಿಕಿತ್ಸೆ ಪಡೆದಿದ್ದರು ಅಂದರೆ ಸರಿ. ಚಾಸಾ -4 ಆಕೆಯನ್ನು ಕರೆದುಕೊಂಡು ಹೋಗಿದ್ದರು ಅಂದರೆ ಸರಿ.

1982 ರಿಂದ ನನಗೆ ಹೆಂಡತಿ ಮಗಳೊಂದಿಗೆ ಸಂಪರ್ಕವೇ ಇಲ್ಲ ಅಂದರೆ ಸರಿ. ಇವತ್ತಿಗೂ ಅವರು ನನ್ನ ಬಳಿ ಮಾತನಾಡುವುದಿಲ್ಲ. ಚಾಸಾ -1 ನನ್ನ ಬಳಿ ಯಾವುದೇ ವಿಚಾರ ಹೇಳಿಲ್ಲ ಅಂದರೆ ಸರಿ. ಮದುವೆಯಾಗಿ 2 ನೇ ದಿನಕ್ಕೆ ಚಾಸಾ -1 ರವರು ತವರಿಗೆ ಬಂದಿದ್ದಳು ಅಂದರೆ ನನಗೆ ಗೊತ್ತಿಲ್ಲ. ನಂತರ ಆಕೆ ಗಂಡನ ಮನೆಗೆ ಹೋಗಿಯೇ ಇಲ್ಲ ಅಂದರೆ ಸರಿಯಲ್ಲ. ಚಾಸಾ -1 ಮಾನಸಿಕ ರೋಗಿಯಾಗಿದ್ದು ಆಕೆಯನ್ನು ಚಾಸಾ -4 ಮತ್ತು 5 ರವರು ಗಂಡನ ಮನೆಗೆ ಕಳುಹಿಸಿಕೊಟ್ಟಿಲ್ಲ ಅಂದರೆ ನನಗೆ ಗೊತ್ತಿಲ್ಲ. ಚಾಸಾ -4 ಮತ್ತು 5 ರವರು ಆರೋಪಿತರ ಮನೆಗೆ ಹೋಗಿದ್ದ ವಿಚಾರ ನನಗೆ ಗೊತ್ತಿಲ್ಲ. ಪೋಲಿಸ ದೂರು ನೀಡುವ ಮುಂಚೆ ನನ್ನನ್ನು ಕೇಳಿರಲಿಲ್ಲ. ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಚಾಸಾ -1 ರವರು ಹೆಚ್ ಬಿ ಹಳ್ಳಿ ಆಸ್ಪತ್ರೆಯಲ್ಲಿ ಅಡಮಿಟ್ ಆದ ವಿಚಾರ ನನಗೆ ಗೊತ್ತಿಲ್ಲ.

ಕೋರ್ಟನ ಆದೇಶದ ಪ್ರಕಾರ ನಾನು ಮದುವೆ ಮಾಡಿಕೊಟ್ಟೆ. ಮದುವೆಯ ದಿನ ಆರೋಪಿಗೆ ಯಾವುದೇ ನಗದು ಅಥವಾ ಚಿನ್ನ ವರದಕ್ಷಿಣೆಯಾಗಿ ಕೇಳಿಲ್ಲ ಹಾಗೂ ನಾವು ಕೊಟ್ಟಿಲ್ಲ ಅಂದರೆ ಸರಿಯಲ್ಲ. ವಿವಾಹದ ಸಂಬಂಧ ಆರೋಪಿ ನನ್ನಿಂದ ಯಾವುದೇ ಚೆಕ್ ಪಡೆದಿಲ್ಲ ಅಂದರೆ ಸರಿಯಲ್ಲ.

**ಎಸ್ ಸಿ ನಂ. 5078/2021**

ಈ ಪ್ರಕರಣ ದಾಖಲಾಗಲು ಚಾಸಾ -4 ಕಾರಣ ಅಂದರೆ ಇರಬಹುದು. ಚಾಸಾ -1 ಮಾನಸಿಕ ರೋಗಿಯಾಗಿದ್ದು, ಅದನ್ನು ಮುಚ್ಚಿಟ್ಟು ವಿವಾಹ ಮಾಡಿದ್ದೇವೆ ಅಂದರೆ ಸರಿಯಲ್ಲ. ಚಾಸಾ -4 ಪೋಲಿಸರಿಗೆ ಹೆದರಿಸಿ ಕೇಸ್ ದಾಖಲಿಸಿದ್ದಾಳೆ ಅಂದರೆ ನನಗೆ ಗೊತ್ತಿಲ್ಲ.

ನನಗೆ ಆರೋಪಿತರ ಮೇಲೆ ಯಾವುದೇ ವೈಶಮ್ಯ ಇಲ್ಲ. ನನ್ನ ಮಗಳಿಗೆ ಗಂಡನ ಜೊತೆ ಸಂಸಾರ ಮಾಡುವ ಇಚ್ಛೆ ಯೇ ಇಲ್ಲ. ನಾನು ಯಾವುದೇ ವರದಕ್ಷಿಣೆ ಕೊಟ್ಟಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.